## ಹೆಚ್ಚು ಜನರು ವಿಡಿಯೊ ನೋಡುವಂತೆ ಮಾಡಬೇಕು

ಸದ್ಯಕ್ಕೆ ಯಾವ ಕೆಲಸದಲ್ಲಿ ತೊಡಗಿರುವಿರಿ ಎಂಬ ಪ್ರಶ್ನೆಗೆ ರಿಕ್ಕಿ ಕೇಜ್ ಹೇಳಿದ್ದಿದು: 'ಡಿವೈನ್ ಟೈಡ್ಸ್' ಅನ್ನು ಹೆಚ್ಚು ಜನರು ಕೇಳುವಂತೆ–ನೋಡುವಂತೆ ಮಾಡುವ ಕೆಲಸದಲ್ಲಿದ್ದೇನೆ.' ಗ್ರ್ಯಾಮಿ ಒಲಿದ ಮೇಲೆ ವಿಡಿಯೊಗಳನ್ನು ನೋಡುತ್ತಿರುವವರ ಸಂಖ್ಯೆ ಗಣನೀಯವಾಗಿ ಏರಿರುವುದು ಆಶಾವಾದದಂತೆ ಕಾಣುತ್ತಿದೆ. ತಾವು ಆರಾಧಿಸುತ್ತಿದ್ದ ಸ್ಟುವರ್ಟ್ ಜತೆಗೂಡಿ ಸ್ವರಗಳ ಬೆಸೆವ ಕೆಲಸ ಕೊಟ್ಟ ಮುದದ ಅನುಭವವನ್ನು ಅವರು ಮತ್ತೆ ಮತ್ತೆ ಆಸ್ವಾದಿಸಿದರು. ಭಾರತೀಯ ಶಾಸ್ತ್ರೀಯ ರಾಗಗಳೆಂದರೆ ಸ್ಟುವರ್ಟ್ ಅವರಿಗೂ ಮೆಚ್ಚು. ಅಮೆರಿಕದಲ್ಲಿ ಅವರು, ಭಾರತದಲ್ಲಿ ಇವರು ಸಂಗೀತ ರೂಪಿಸಿದ ಅನುಭವದ ಕುರಿತು ರಿಕ್ಕಿ ಹೀಗೆಂದರು: 'ಇವತ್ತಿನ ತಂತ್ರಜ್ಞಾನ ಇಂತಹ ಸಾಧ್ಯತೆಗಳನ್ನು ಹೆಚ್ಚಿಸಿದೆ. ಆರೇಳು ವರ್ಷಗಳಿಂದ ಈ ರೀತಿ ರಿಮೋಟ್ ರೆಕಾರ್ಡಿಂಗ್ ಸೆಷನ್ಸ್ ನಡೆಯುತ್ತಲೇ ಇದೆ. ಝೂಮ್ ಮೀಟಿಂಗ್‌ಗಳು, ಸ್ಕೈಪ್ ಚಾಟ್‌ನಿಂದ ಎಷ್ಟೋ ಸ್ವರ ಸಂವಾದಗಳು ಸಾಧ್ಯ.'



ಕಪ್ಪೆಗಳ ವಿಡಿಯೊಗೆ 'ಗಾಂಧಿ' ಎಂದೇಕೆ ಹೆಸರು? 'ದೇಶದ ಶ್ರೇಷ್ಠತೆಯನ್ನು ಅದು ತನ್ನಲ್ಲಿನ ಪ್ರಾಣಿಗಳ ವಿಷಯದಲ್ಲಿ ಹೇಗೆ ವರ್ತಿಸುತ್ತದೆ ಎನ್ನುವುದರ ಮೇಲೆ ತೀರ್ಮಾನಿಸಬೇಕು ಎಂದು ಗಾಂಧೀಜಿ ಹೇಳಿದ್ದರು. ಆ ಸಂದೇಶವನ್ನು ಹಾಕಿಯೇ 30 ಕೋಟಿ ವರ್ಷಗಳಿಂದ ಭೂಮಿ ಮೇಲೆ ಇರುವ ಕಪ್ಪೆಗಳ ಲೋಕದ ಅನಾವರಣ ಮಾಡಿದೆ. ಹವಸ್ ಎನ್ನುವವರು ಪಶ್ಚಿಮ ಘಟ್ಟಗಳಲ್ಲಿ ಮಾಡಿದ ಚಿತ್ರೀಕರಣ ಅದು...' ರಿಕ್ಕಿ ಉತ್ತರ ಚುಟುಕಾಗಿತ್ತು. ಕೊಳಲು, ಸರೋದ್, ವಯಲಿನ್ ತರಹದ ವಾದ್ಯಗಳು ಹೊಮ್ಮಿಸುವ ನಾದ ಭಾವತೀವ್ರವಾದದ್ದು. ಆದಕ್ಕೇ ಅವು ತಮಗಿಷ್ಟ ಎನ್ನುತ್ತಾ ರಿಕ್ಕಿ ಮಾತಿಗೆ ಅರ್ಥಪೂರ್ಣ ವಿರಾಮ ಹಾಕಿದರು

### ವಿಶ್ವದ ಲಯ ಹಿಡಿಯುವ ಬಗೆ



ಸಕಲ ಚರಾಚರಗಳನ್ನು ಒಳಗೊಂಡ ವಿಶ್ವಕ್ಕೇ ಒಂದು ಲಯವಿದೆ. ಅದನ್ನು ಕೇಳಿಸಿಕೊಳ್ಳುತ್ತಲೇ ಸಂದೇಶವೊಂದನ್ನು ಕಟ್ಟಿಕೊಡುವುದು ರಿಕ್ಕಿ ಅವರ ಉದ್ದೇಶ. ನಾನು ಹನ್ನೆರಡು ವರ್ಷಗಳಿಂದ ಅವರನ್ನು ಬಲ್ಲೆ. ಏಳು ವರ್ಷಗಳಿಂದ ಅವರೊಟ್ಟಿಗೆ ಸಂಗೀತದ ಕೆಲಸಗಳಲ್ಲೂ ತೊಡಗಿದ್ದೇನೆ. ಅವರು ಹಾರ್ನ್‌ಬಿಲ್ ಹಕ್ಕಿಗಳ ಬದುಕಿನ ಸೂಕ್ಷ್ಮಗಳನ್ನು ಒಳಗೊಂಡಂಥ ಸಂಗೀತ ವಿಡಿಯೊವನ್ನು ಹಿಂದೆ ರೂಪಿಸಿದ್ದರು. ಆನೆಗಳ ಕಾರಿಡಾರ್‌ಗೆ ಸಂಬಂಧಿಸಿದ ಪ್ರಕೃತಿ ಸವಾಲಿನ ಬಗೆಗೆ ಇನ್ನೊಂದು ವಿಡಿಯೊ ಮಾಡಿದ್ದರು. 'ಕಾಣದೇ ಹೋಗಿದೆ ನನ್ನ ಮಳೆಬಿಲ್ಲು' ಎಂದಿದ್ದರು. ಸಂಗೀತವನ್ನು ಯಃಕಶ್ಚಿತ್ ಕೇಳಿಸಬೇಕೆಂದು ಅವರು ಆಲ್ಬಂ ಮಾಡುವುದಿಲ್ಲ. ಅದೊಂದು ಅನುಭವ ಆಗಬೇಕೆಂದೇ ಮಾಡುತ್ತಾರೆ. ನಾನು 'ಡಿವೈನ್ ಟೈಡ್ಸ್' ಸರಣಿಯ ಮೂರು ವಿಡಿಯೊಗಳಲ್ಲಿ ಕೆಲಸ ಮಾಡಿದ್ದೇನೆ. ಅದಕ್ಕೆ ಗ್ರ್ಯಾಮಿ ಬಂದಿರುವುದು ಹೆಮ್ಮೆಯ ಸಂಗತಿ. ಎಲ್ಲ ಸಂಗೀತದಲ್ಲೂ ಭಾರತೀಯ ಶಾಸ್ತ್ರೀಯತೆ ಇದೆ ಎನ್ನುವುದೂ ನನಗೆ ಖುಷಿ ತಂದಿದೆ.

**-ವಾರಿಜಾಶ್ರೀ ವೇಣುಗೋಪಾಲ್**

ಬದುಕು ಎಂದು ರಿಕ್ಕಿ ಅವರಿಗೆ ಅನ್ನಿಸಿರಬೇಕು. ಮೂರು ಲಕ್ಷ ವರ್ಷಗಳಿಂದ ಮನುಷ್ಯ ಬದುಕುತ್ತಿದ್ದಾನೆ. ಕಪ್ಪೆಗಳಾದರೋ ಮೂವತ್ತು ಕೋಟಿ ವರ್ಷಗಳಿಂದ ಇವೆ ಎಂಬ ಒಕ್ಕಣೆ ಈ ವಿಡಿಯೊದಲ್ಲಿ ಕಾಣುತ್ತದೆ. ಕಪ್ಪೆಗಳ ಚಲನಚಲನ, ಅವುಗಳ ಸಂಸಾರಸುಖ, ಸಂಘಜೀವನ, ನಿರುಮ್ಮಳ ಕದಲಿಕೆಗಳನ್ನು ಒಳಗೊಳ್ಳುವ ಈ ವಿಡಿಯೊ ಸಂಗೀತದ ಛಾಪಿನಿಂದಲೂ ಕಾಡುತ್ತದೆ. ಗಾಂಧಿ ಕೂಡ ಹಾಗೆಯೇ ಕಾಡುವ ವ್ಯಕ್ತಿತ್ವವೇ ಹೌದಲ್ಲವೆ?

'ಹಿಮಾಲಯಾಸ್' ವಿಡಿಯೊದಲ್ಲಿ ಬಳಸಿರುವ ರಾಗಕ್ಕೇ ಹಿಂದಿಯಲ್ಲಿ ಸಾಹಿತ್ಯ ಬರೆಸಿ, 'ಐ ಆ್ಯಮ್ ಚೇಂಜ್' ಎಂಬ ಹಾಡುಗಾರಿಕೆಯ ವಿಡಿಯೊವನ್ನು ರಿಕ್ಕಿ ರೂಪಿಸಿದ್ದಾರೆ. ಎರಡರ ಭಾವೋದ್ದೇಶವೇ ಬದಲಾಗುವ ಆಸಕ್ತಿಕರ ಪ್ರಕ್ರಿಯೆ ಇದು. ಸಲೀಂ–ಸುಲೇಮಾನ್ ಹಾಡುಗಾರಿಕೆಯ ಸೇರ್ಪಡೆ ಈ ವಿಡಿಯೊದ ಸಂಗೀತ ಗುಣಗ್ರಹಣಾವಕಾಶವನ್ನು ಹೆಚ್ಚಿಸಿದೆ. 'ಅವರ್ ಹೋಮ್' ವಿಡಿಯೊದಲ್ಲಿ ಪ್ರಕೃತಿಯ ಮಡಿಲಿನಲ್ಲಿ ಬತ್ತಲಾಗುತ್ತಾ ತಾನೇ ನಿಸರ್ಗಮಾತೆಯಂತೆ ಭಾಸವಾಗುವ ಮಹಿಳೆಯ ದರ್ಶನವಿದೆ. 'ಮಾತೆ' ಎನ್ನುವುದನ್ನು ಸುತ್ತಲಿನ ಜಗತ್ತಿಗೆ ಅನ್ವಯಿಸಿರುವ ಈ ಕ್ರಮ ವಾಚ್ಯವಾದರೂ ಸಶಕ್ತವಾದ ಮೆಟಾಫರ್ ಆಗಿಯೂ ಪ್ರಕಟಗೊಳ್ಳಬಲ್ಲದು. 'ಪ್ಯಾಸ್ಟೋರಲ್ ಇಂಡಿಯಾ' ವಿಡಿಯೊದ ಆರಂಭದ ಆಲಾಪ 'ತೆರೆದಿದೆ ಮನೆ ಓ ಬಾ ಅತಿಥಿ' ಹಾಡಿನ ಆತ್ಮವನ್ನು ನೆನಪಿಸುತ್ತಲೇ ಸೆಳೆದುಕೊಳ್ಳುತ್ತದೆ. ಪ್ರಕೃತಿಯ ರಮಣೀಯ ದೃಶ್ಯಗಳನ್ನು ತೋರಿಸುತ್ತಾ ಸಾಗುವ ವಿಡಿಯೊದ ಕೊಳಲ ಉಲಿ ಕೋಗಿಲೆಯ ದನಿ ಮನದ ಮೂಲೆಯಲ್ಲಿ ಅನುರಣಿಸುವಂತೆ ಮಾಡುತ್ತದೆ.

ವಾರಿಜಾಶ್ರೀ ವೇಣುಗೋಪಾಲ್ ಕಂಠದ ಪಕ್ವತೆ ಹಾಗೂ ಕೊಳಲಿನ ನಿನಾದ, ಅರುಣ್ ಕುಮಾರ್ ಅವರ ತಾಳ, ಸುಮಾರಾಣಿ ಬೆರಳುಗಳಾಡುವ ಕಾಡುವ ಸಿತಾರ್, ಮನೋಜ್ ಜಾರ್ಜ್ ವಯೊಲಿನ್ ಮೋಡಿ, ವಿಧಿ ಶರ್ಮ ಅವರ ಸುಶ್ರಾವ್ಯ ಕಂಠ... ಹೀಗೆ ಎಲ್ಲವುಗಳನ್ನು ರಿಕ್ಕಿ ಕೇಜ್ ಹಾಗೂ ಸ್ಟುವರ್ಟ್ ಕೋಪ್‌ಲ್ಯಾಂಡ್ ತಮ್ಮ ಸಂಗೀತ ಕಲೆಯ ಬಲೆಯ ಹೆಣಿಗೆಯ ಭಾಗವಾಗಿಸಿದ್ದಾರೆ. ಸ್ಟುವರ್ಟ್ ಅವರ ಡ್ರಮ್ಸ್ ವಾದ್ಯವೈವಿಧ್ಯದ ಕುರಿತೇ ಸುದೀರ್ಘವಾಗಿ ಚರ್ಚಿಸಬಹುದಾದಷ್ಟು ಸತ್ವ ಇದರಲ್ಲಿದೆ. ಎರಡು ಭಿನ್ನ ಸಂಗೀತ ಪ್ರಕಾರಗಳ ಮನಸ್ಸುಗಳು ಸೇರಿ ಹೇಗೆ ಸಶಕ್ತವಾದ 'ಫ್ಯೂಷನ್' ಅನ್ನು ಒದಗಿಸಲು ಸಾಧ್ಯವೆನ್ನುವುದಕ್ಕೂ ಈ ಆಲ್ಬಂನಲ್ಲಿ ಉದಾಹರಣೆಗಳು ಸಿಗುತ್ತವೆ.

ಸಹಬಾಳ್ವೆಯ ತತ್ವವನ್ನು ಇಟ್ಟುಕೊಂಡೇ ಇಂತಹ ಸಂಗೀತವನ್ನು ಸೃಜಿಸಿರುವುದಾಗಿ ರಿಕ್ಕಿ ಗ್ರ್ಯಾಮಿ ಪ್ರಶಸ್ತಿ ಸ್ವೀಕರಿಸಿದಾಗಲೂ ಹೇಳಿದರು. ಯಾರೋ ಕೇಳಿದರೆಂದೋ ಸಿನಿಮಾಗಳಿಗೆಂದೋ ಸಂಗೀತ ನೀಡುವುದನ್ನು ಅವರು ನಿಲ್ಲಿಸಿ ವರ್ಷಗಳೇ ಸಂದಿವೆ. ಪ್ರಕೃತಿಯ ಎದೆಬಡಿತವನ್ನು ಹಿಡಿದು ಅದಕ್ಕೆ ಸಂಗೀತ ಬೆಸೆಯುವುದರಲ್ಲೇ ಅವರಿಗೀಗ ಆಸಕ್ತಿ. ಅದಕ್ಕೆ ಗ್ರ್ಯಾಮಿಯಂಥ ಕಿರೀಟ ಎರಡನೇ ಸಲ ಒಲಿದುಬಂದಿರುವುದು ಅವರ ಸಾರ–ಸತ್ವಕ್ಕೆ ಸಂದಿರುವ ದೊಡ್ಡ ಗೌರವ.

ಪ್ರತಿಕ್ರಿಯಿಸಿ: feedback@sudha.co.in

### ಅಭಿಮಾನದಿಂದ ಸ್ವರದೊಡನಾಟದವರೆಗೆ...

ರಿಕ್ಕಿ ಕೇಜ್ ತಮ್ಮ ಕೋಣೆಯ ಗೋಡೆಯ ಮೇಲೆ ಸ್ಟುವರ್ಟ್ ಕೋಪ್‌ಲ್ಯಾಂಡ್ ಅವರ ಪೋಸ್ಟರ್‌ಗಳನ್ನು ಚಿಕ್ಕಪ್ರಾಯದಲ್ಲಿದ್ದಾಗ ಅಂಟಿಸಿಕೊಂಡಿದ್ದರು. ಅವರನ್ನು, ಅವರ ಡ್ರಮ್ಸ್ ಚತುರತೆಯನ್ನು ಆಗಿನಿಂದಲೂ ಆರಾಧಿಸುತ್ತಿದ್ದರು. ಈಗ ಅವರೊಟ್ಟಿಗೆ ಕೆಲಸ ಮಾಡಿದ ಖುಷಿ. ಕೋವಿಡ್ ಸಂದರ್ಭದಲ್ಲಿ ಮುಖತಃ ಭೇಟಿಯಾಗದೇ ಇದ್ದರೂ ಈ ಆಲ್ಬಂನ ಯೋಜನೆಯನ್ನು ಸಾಕಾರಗೊಳಿಸಿದ್ದು ಗಮನಾರ್ಹ. ಸ್ಟುವರ್ಟ್ ಕೋಪ್‌ಲ್ಯಾಂಡ್ ಅವರು ಅಮೆರಿಕದಲ್ಲಿ ತಮ್ಮ ನಾದದಲೆಯನ್ನು ಹೊಮ್ಮಿಸಿ, ಮುದ್ರಿಸಿ ಕಳುಹಿಸಿದರೆ, ಇಲ್ಲಿನ ಕಲಾವಿದರ ವಾದ್ಯ, ಕಂಠ ವೈವಿಧ್ಯಕ್ಕೆ ಅದನ್ನು ಬೆಸೆಯುವ ಕೆಲಸವನ್ನು ರಿಕ್ಕಿ ಕೇಜ್ ಮಾಡಿದರು. ಇಬ್ಬರು ಸ್ವರ ಸಂಯೋಜಕರು ಕೋವಿಡ್ ಕಾಲವನ್ನು ಯಶಸ್ವಿಯಾಗಿ ಬಳಸಿಕೊಂಡಿದ್ದ ಬಗೆ ಇದು.

'ಪ್ರಕೃತಿಯೇ ನನ್ನೊಳಗಿನ ಸಂಗೀತ ನುಡಿಸಲು ಪ್ರೇರಣೆ' ಎನ್ನುವ ರಿಕ್ಕಿ, ಅದನ್ನು ನಿಸರ್ಗದ ಮಡಿಲಿಗೇ ಇಟ್ಟು ಮಗುವಾಗಿರುವ ಪರಿ ಅನನ್ಯ. ಸಿನಿಮಾಗಳಲ್ಲಿ ಕೆಲಸ ಮಾಡುವ ಸಂಕಲನಕಾರ–ಸಿನಿಮಾಟೊಗ್ರಾಫರ್ ಪ್ರತೀಕ್ ಶೆಟ್ಟಿ, ಸಂಗೀತ ನಿರ್ದೇಶಕ ಚರಣ್ ರಾಜ್ ಅವರಂಥವರ ಕಾಣ್ಕೆಯೂ ಈ ಆಲ್ಬಂನಲ್ಲಿ ಇದೆ.

Divine Tides ವೀಕ್ಷಣೆಗೆ http://surl.li/bsilf ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.